**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ**

**ಸಿಸಿ ನಂಃ 49/2024**

**ಪಿರ್ಯಾದಿ** ಃ ಕರ್ನಾಟಕ ಸರ್ಕಾರ,
ಬೆಳಕವಾಡಿ ಪೋಲೀಸ್ ಠಾಣೆ ಮುಖೇನ.

- ವಿರುದ್ದ -

**ಆರೋಪಿ** ಃ **ಮೂರ್ತಿ.ಬಿ.ಎಸ್ ಲೇಟ್ ಗೌಡರ ಬಸವಣ್ಣ**
**ವಯಸ್ಸು** ಃ 44 ವರ್ಷ,
**ವಾಸಃ** ಸುತ್ತೂರು ಗ್ರಾಮ,
ಬಿಳಿಗೆರೆ ಹೋಬಳಿ, ನಂಜನಗೂಡು ತಾಲ್ಲೂಕು,
ಮೈಸೂರು ಜಿಲ್ಲೆ.

**ಆರೋಪಣೆ**

ದಿನಾಂಕ **09.04.2024** ರಂದು ಬೆಳಿಗ್ಗೆ **5.45** ಗಂಟೆಯ ಸಮಯದಲ್ಲಿ ಬೆಳಕವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ಮುಟ್ಟನಹಳ್ಳಿ ಗ್ರಾಮದ ವಾಸಿ ಪಟೇಲ್ ಲಿಂಗಪ್ಪ ರವರ ಅಂಗಡಿ ಮನೆಯ ಮುಂದೆ ಸರಗೂರು ಕಡೆಯಿಂದ ಬಿ.ಜಿ.ಪುರ ಕಡೆಗಾದಂತೆ ಹಾದು ಹೋಗಿರುವ ರಸ್ತೆಯ ಎಡಬದಿಯಲ್ಲಿ ಮುಟ್ಟನಹಳ್ಳಿ ಗ್ರಾಮದ ವಾಸಿ ಲೇಟ್ ಬಸಪ್ಪ ರವರ ಮಗನಾದ ನಿಂಗಪ್ಪ ರವರು ತಮ್ಮ ಮನೆ ಕಡೆಗಾದಂತೆ ಹೋಗಲು ನಡೆದುಕೊಂಡು ಹೋಗುತ್ತಿದ್ದಾಗ**,** ಆರೋಪಿಯಾದ ನೀವು ಕೆಎ**-09-**ಹೆಚ್‌ಜೆಡ್**-7577** ನಂಬರಿನ ಹೀರೋ ಸ್ಪೆಂಡರ್ ಪ್ಲಸ್ ಮೋಟಾರ್ ಸೈಕಲ್ ಅನ್ನು ಸರಗೂರು ಕಡೆಯಿಂದ ಬಿ.ಜಿ.ಪುರ ಕಡೆಗಾದಂತೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ನಡೆದುಕೊಂಡು ಹೋಗುತ್ತಿದ್ದ ನಿಂಗಪ್ಪ ರವರಿಗೆ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿರುತ್ತೀರಿ**.** ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **279** ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ದ ಆಪಾದಿಸಿದೆ**.**

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆದ ಅಪಘಾತದಲ್ಲಿ, ಆರೋಪಿಯಾದ ನೀವು ಕೆಎ-**09**-ಹೆಚ್‌ಜೆಡ್-**7577** ನಂಬರಿನ ಹೀರೋ ಸ್ಪೆಂಡರ್ ಪ್ಲಸ್ ಮೋಟಾರ್ ಸೈಕಲ್ ಅನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ನಿಂಗಪ್ಪ ರವರಿಗೆ ಡಿಕ್ಕಿಪಡಿಸಿದ ಪರಿಣಾಮವಾಗಿ ನಿಂಗಪ್ಪ ರವರು ಕೆಳಕ್ಕೆ ಬಿದ್ದು, ಅವರ ತಲೆಗೆ ತೀವ್ರ ಸ್ವರೂಪದ ರಕ್ತಗಾಯವಾಗಿ, ಎಡಭಾಗದ ಕಿವಿಯಲ್ಲಿ ರಕ್ತ ಬಂದು, ಬಲಕಾಲಿನ ಮೊಣಕಾಲಿನ ಬಳಿ, ಪಾದದ ಬಳಿ ಮತ್ತು ಎಡಕಾಲಿನ ಪಾದದ ಬಳಿ ತರಚಿದ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿದ್ದಾಗ ಚಿಕಿತ್ಸೆ ಫಲಕಾರಿಯಾಗದೇ ಬೆಳಿಗ್ಗೆ **10.20** ಗಂಟೆಯಲ್ಲಿ ಮೃತಪಟ್ಟಿರುತ್ತಾರೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ **304(ಎ)** ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯೊಳಗೆ ಶಿಕ್ಷಾರ್ಹ ಅಪರಾದ ಎಸಗಿದ್ದೀರಿ ಎಂದು ನಿಮ್ಮ ವಿರುದ್ಧ ಆಪಾದಿಸಿದೆ.

ಪ್ರಶ್ನೆ: 1. ಮೇಲೆ ಓದಿ ಹೇಳಿ ವಿವರಿಸಿದ ಆಪಾದನೆಯು ಅರ್ಥವಾಯಿತೇ ?

**ಉತ್ತರಃ**

ಪ್ರಶ್ನೆ. 2. ಆಪಾದನೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ
ಬಯಸುತ್ತೀರಾ ?

**ಉತ್ತರಃ**

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃದೀಕರಿಸುತ್ತೇನೆ.)

ದಿನಾಂಕಃ 26.12.2025

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**